(ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು :

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಪೌರಾಡಳಿತ, ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಬೆಂಗಳೂರು ಜಲ ಮಂಡಳಿ ಸಚಿವರು) : ಮಾನ್ಯ ಅಧ್ಯಕ್ಷರೆ, ದಿ: 09–03–2011ರ 8ನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 116 ಪ್ರಶ್ನೆಗಳ ಪೈಕಿ 97 ಪ್ರಶ್ನೆಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲಾಯಿತು.

(ಅನುಬಂಧ – VIII)

4. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ :

(ಅ) ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಮಹಿಳೆಯರು ಸ್ವಾವಲಂಬಿಗಳಾಗಲು ಉಚಿತವಾಗಿ ಹೊಲಿಗೆ ಯಂತ್ರಗಳನ್ನು ಕೊಡದೇ ಇರುವ ಬಗ್ಗೆ.

ಶ್ರೀ ನೆ.ಲ. ನರೇಂದ್ರಬಾಬು (ಮಹಾಲಕ್ಷ್ಮಿ ಲೇಔಟ್) : ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಮೂಲಕ ಸರ್ಕಾರದವರನ್ನು ಕೇಳುವುದೇನೆಂದರೆ, ನಿನ್ನೆಯಷ್ಟೇ ವಿಶ್ವ ಮಹಿಳಾ ದಿನಾಚರಣೆಯಾಯಿತು. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಳೆದ 4 ವರ್ಷಗಳಿಂದ ಮಹಿಳೆಯರು ಸ್ವಾವಲಂಬಿಗಳಾಗಲು ಹೊಲಿಗೆ ತರಬೇತಿ ನೀಡಲಾಗಿತ್ತು. ಆದರೆ, ಉಚಿತವಾಗಿ ಕೊಡಬೇಕಾದ ಹೊಲಿಗೆ ಯಂತ್ರವನ್ನು ಕೊಡದೇ ಇರುವುದರಿಂದ ಆ ಹೆಣ್ಣು ಮಕ್ಕಳು ಗೋಳಿಡುತ್ತಿದ್ದಾರೆ. ಅವರು ಕಲಿತಿರುವ ವಿದ್ಯೆ ತಮಗೆ ಮರೆಯುತ್ತಿದೆ ಎಂದು ಹೇಳುತ್ತಿದ್ದಾರೆ. ಸನ್ಮಾನ್ಯ ಸುರೇಶ್‌ಕುಮಾರ್‌ರವರಿಗೂ ಇದು ಗೊತ್ತಿದೆ. ಹೊಲಿಗೆ ಯಂತ್ರಗಳನ್ನು ಎಷ್ಟು ದಿವಸಗಳಲ್ಲಿ ಕೊಡುವ ಯೋಚನೆ ಇದೆ? ಇದಕ್ಕೊಂದು ಕಾಲಮಿತಿ ನಿಗದಿಪಡಿಸುತ್ತೀರಾ?

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಪೌರಾಡಳಿತ, ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಬೆಂಗಳೂರು ಜಲ ಮಂಡಳಿ ಸಚಿವರು) : ಮಹಾನಗರಪಾಲಿಕೆಯಿಂದ ಮಹಿಳೆಯರಿಗೆ ಹೊಲಿಗೆ ಯಂತ್ರ

ನೀಡಿಲ್ಲ. ನಾನು ಪೂರ್ಣ ಮಾಹಿತಿ ತರಿಸಿಕೊಂಡು statement ಮಾಡುತ್ತೇನೆ. ನೀವು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದ್ದೀರಿ. ಪೂರ್ಣ ಮಾಹಿತಿ ಇದ್ದಿದ್ದರೆ ಹೇಳುತ್ತಿದ್ದೆ.

ಅಧ್ಯಕ್ಷರು : ಮಾಹಿತಿ ಇಲ್ಲವೆಂದು ಹೇಳುತ್ತಿದ್ದಾರೆ.

ಶ್ರೀ ನೆ.ಲ. ನರೇಂದ್ರಬಾಬು : ತಮಗೆ ಸಮಸ್ಯೆ ಗೊತ್ತಿದೆ.

ಅಧ್ಯಕ್ಷರು : ತಾವು ಪ್ರಸ್ತಾಪ ಮಾಡಿದ್ದೀರಿ. ಅವರು statement ಮಾಡುತ್ತೇನೆಂದು ಹೇಳಿದ್ದಾರಲ್ಲ? statement ಮಾಡುತ್ತೇನೆಂದ ಮೇಲೆ ಆಯಿತು. statement ಮಾಡುತ್ತೇನೆಂದು ಹೇಳಿದ ಮೇಲೆ ಮತ್ತೇನು?

ಶ್ರೀ ನೆ.ಲ. ನರೇಂದ್ರಬಾಬು : ಹೊಲಿಗೆಯಂತ್ರವನ್ನು ಕೊಡಬೇಕಾಗಿದ್ದು, 4 ವರ್ಷಗಳಾಗಿದ್ದರೂ ಕೊಟ್ಟಿಲ್ಲ. ಎಷ್ಟು ದಿವಸಗಳಲ್ಲಿ ಕೊಡುತ್ತಾರೆಂಬ ಬಗ್ಗೆ ಭರವಸೆ ಕೊಡಲಿ. ಈ ವರ್ಷ ಕೊಡುತ್ತೀರಾ, ಮುಂದಿನ ವರ್ಷ ಕೊಡುತ್ತೀರಾ ಅಥವಾ ಇನ್ನೂ ಎರಡು ವರ್ಷ ಬೇಕೆ? ಇನ್ನೂ 4 ವರ್ಷಬೇಕೆ ಎಂದು ಕೇಳುತ್ತಿದ್ದೇನೆ.

ಅಧ್ಯಕ್ಷರು : ಆ ತರಹ ಕೇಳುವುದಕ್ಕೆ ಬರುವುದಿಲ್ಲ.

ಶ್ರೀ ನೆ.ಲ. ನರೇಂದ್ರಬಾಬು : ನಾನು ಶೂನ್ಯವೇಳೆಯಲ್ಲಿ ಕೇಳಿದ ಪ್ರಶ್ನೆ ಬಹಳ ನಿಖರವಾಗಿದೆ. ಎಷ್ಟು ದಿವಸಗಳಲ್ಲಿ ಒದಗಿಸುತ್ತೀರಿ? ಈಗಾಗಲೇ 4 ವರ್ಷ ಕಳೆದುಹೋಗಿದೆ.

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಸದಸ್ಯರು ಶೂನ್ಯವೇಳೆಯಲ್ಲಿ ಒಂದು ವಿಷಯ ಪ್ರಸ್ತಾಪಿಸಿದ್ದಾರೆ. ಅದರ ಮೇಲೆ ಸರ್ಕಾರದವರು ಮಾಹಿತಿ ತೆಗೆದುಕೊಂಡು statement ಮಾಡುವುದು. ನಿಯಮ. ಮಹದೇವಪ್ಪನವರು ನಮಗೆ ಸಹಾಯ ಮಾಡಿದ್ದಾರೆ. ಒಂದಂತೂ ನಿಜ. 4 ವರ್ಷಗಳಿಂದ ಕೊಡಬೇಕಾದ ಹೊಲಿಗೆ ಏನು ಬಾಕಿ ಇದೆ, ಅದನ್ನು ಖಂಡಿತ ಕೊಡುತ್ತೇವೆ. ಅತಿ ಬೇಗದಲ್ಲಿ ಕೊಡುತ್ತೇವೆ.